ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಮಾನ್ಯ ಅಧ್ಯಕ್ಷರೆ, 2008ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2008 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2. ಕರ್ನಾಟಕ ಮೌಲ್ಯವರ್ಧಿತ ತೆರಿಗೆ(ತಿದ್ದುಪಡಿ) ವಿಧೇಯಕ,2008

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಮಾನ್ಯ ಅಧ್ಯಕ್ಷರೆ, 2008ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ [ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2008ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ[ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ರಿಂದ 21 ರವರೆಗೆ: ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು: "ಖಂಡ 2 ರಿಂದ 21 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 21 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾದವು)

ಖಂಡ 1 ಇತ್ಯಾದಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಮಾನ್ಯ ಅಧ್ಯಕ್ಷರೆ, 2008

ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ[ತಿದ್ದುಪಡಿ] ಸಂಸ್ಥೆಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2008 ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ [ತಿದ್ದುಪಡಿ] ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

3. ಕರ್ನಾಟಕ ತೆರಿಗೆ ಕಾನೂನುಗಳ[ತಿದ್ದುಪಡಿ] ವಿಧೇಯಕ,2008

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಮಾನ್ಯ ಅಧ್ಯಕ್ಷರೆ, 2008ರ ಕರ್ನಾಟಕ ತೆರಿಗೆ ಕಾನೂನುಗಳ [ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2008ರ ಕರ್ನಾಟಕ ತೆರಿಗೆ ಕಾನೂನುಗಳ [ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ:2

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಖಂಡ 2ಕ್ಕೆ ತಿದ್ದುಪಡಿ ಮಂಡಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ಈ ಕೆಳಕಂಡಂತೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

"2.1932ರ ಮೈಸೂರು ಅಧಿನಿಯಮ IX ರ ತಿದ್ದುಪಡಿ – ಮೈಸೂರು ಜೂಜು ತೆರಿಗೆ ಅಧಿನಿಯಮ, 1932ರ[1932ರ ಮೈಸೂರು ಅಧಿನಿಯಮ IX] 3 ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

3 –ಎ ರಾಜಿಯ ಮೂಲಕ ಟೋಟಲೈಜೆಟರ್ ತೆರಿಗೆಯ ಸಂದಾಯ–3ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಆದರೆ ನಿಮಿಸಬಹುದಾದ ಷರತ್ತುಗಳಿಗೆ ಒಳಪಟ್ಟು ಯಾವುದೇ ವರ್ಷದಲ್ಲಿ ಲೈಸೆನ್ಸುದಾರನು 3ನೇ ಪ್ರಕರಣದಡಿಯಲ್ಲಿ ಸಂದಾಯವಾಗತಕ್ಕ ಟೋಟಲೈಜೆಟರ್ ತೆರಿಗೆಯ ಬದಲು ಟೋಟಲೈಜೆಟರ್‌ಗೆ ಸಂದಾಯ ಮಾಡಲಾದ ಒಟ್ಟು ಮೊಬಲಗಿನ ಶೇಕಡ 4ರ ದರದಲ್ಲಿ ರಾಜಿಯ ರೂಪದಲ್ಲಿ ಒಂದು ಮೊಬಲಗನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡರೆ, ರಾಜ್ಯ ಸರ್ಕಾರವು ಅಂಥ ಸಂದಾಯವನ್ನು ಒಪ್ಪಿಕೊಳ್ಳಬಹುದು.

ವಿವರಣೆ: ರಾಜಿಯ ಮೊಬಲಗಿನ ದರವನ್ನು ವರ್ಷದ ಮಧ್ಯದಲ್ಲಿ ಬದಲಾಯಿಸಿದ್ದಲ್ಲಿ, ವರ್ಷದ ಸಂಬಂಧಪಟ್ಟ ಭಾಗದ ತೆರಿಗೆಯ ರಾಜಿ ಮೊಬಲಗನ್ನು ವರ್ಷದ ಆಯಾ ಭಾಗಕ್ಕೆ ಅನ್ವಯಿಸುವ ದರದ ಪ್ರಕಾರ ನಿರ್ಧರಿಸಬಹುದು."